





# ಕರಿಕೆಯ ದಾರಿಯಲ್ಲಿ ಜಲಧಾರೆ

ಪ್ರತಿ ತಿರುವಿನಲ್ಲೂ ಚಿಕ್ಕ ಪುಟ್ಟ, ದೊಡ್ಡ ಜಲಧಾರೆಗಳ ದರ್ಶನ ನಮ್ಮದಾಗಿತ್ತು. ಹೆಜ್ಜೆಹೆಜ್ಜೆಗೂ ನೀರಿನ ಒನಪು ವೈಯ್ಯಾರದ ಕಲರವ ಕರ್ಣಾನಂದಕರ.

■ ಆರ್.ಕೆ.ಮಧು

**ಕೊ**ಡಗಿನ ಭಾಗಮಂಡಲದಿಂದ ಸುಮಾರು 16 ಕಿ.ಮೀ. ದೂರದ ಕರ್ನಾಟಕ–ಕೇರಳ ಗಡಿಪ್ರದೇಶದಲ್ಲಿ ನಮ್ಮ ನಾಲ್ಕು ಜನರ ತಂಡ ಜಲ–ಧಾರೆಯ ಜಾಡು ಹಿಡಿದು ಹೊರಟಿತು. ಮಳೆಯ ಟಪ ಟಪ ಶಬ್ದ, ತೇಲಿ–ಬರುವ ಹನಿಗಳ ಸಿಂಚನ, ಕರಿಕೆಯ ಕಾಡಿನಲ್ಲಿ ಕನಸಿನ ಲೋಕ ಸೃಷ್ಟಿಸಿತ್ತು.

ಭಾಗಮಂಡಲದಿಂದ ಕರಿಕೆಯತ್ತ ರಸ್ತೆಯಲ್ಲೇ ನಮ್ಮ ಚಾರಣ. ಮೂರು ಕಿ.ಮೀ. ದಾಟುವಷ್ಟರಲ್ಲೇ ಜುಳು ಜುಳು ನಿನಾದ ಕೇಳಿಸತೊಡಗಿತು. ಹಳ್ಳ ತೊರೆಗಳಿಂದ ಉಕ್ಕಿ ಬರುವ ಸಂಗೀತದೊಂದಿಗೆ ದಾರಿ ತೆರೆದುಕೊಳ್ಳ–ತೊಡಗಿತು.

ಪ್ರತಿ ತಿರುವಿನಲ್ಲೂ ಚಿಕ್ಕ ಪುಟ್ಟ, ದೊಡ್ಡ ಜಲಧಾರೆಗಳ ದರ್ಶನ ದಕ್ಕಿತು. ಹೆಜ್ಜೆಹೆಜ್ಜೆಗೂ ನೀರಿನ ಒನಪು ವೈಯ್ಯಾರದ ಕಲರವ ಕರ್ಣಾನಂದಕರ. ನೀರ ನಿರ್ಮಲ ಕಲರವಕ್ಕೆ ಹಕ್ಕಿಗಳ ತಾಳವಾದರೆ, ತೇಲಿಬರುವ ಕುಳಿರ್ಗಾಳಿಗೆ ತೊನೆದಾಡುವ ಗಿಡಮರಗಳ ಮೇಳ. ನಿಜಕ್ಕೂ ಕರಿಕೆಯ ಹಾದಿಯಲ್ಲಿ ವನಸಿರಿಯ ಸೊಬಗು ಮೇಳೈಸಿತ್ತು.

ಪ್ರತಿ ತಿರುವಿನಲ್ಲಿ ಕಾಣುವ ಜಲಧಾರೆಯನ್ನು ಕ್ಯಾಮೆರಾದಲ್ಲಿ ಸೆರೆಹಿಡಿವ ಹಂಬಲ ನನ್ನದು. ಆದರೆ ಜಲಧಾರೆಯ ಸೌಂದರ್ಯ ನೋಡುತ್ತಾ ಎಲ್ಲವನ್ನೂ ಮರೆಯುತ್ತಿದ್ದೆ. ಜಲಧಾರೆಯ ಆರ್ಭಟ, ಭೋರ್ಗರೆತ, ಮೊರೆತ ಎಲ್ಲವೂ ಭವ್ಯವೇ. ಕೆಲವು ಜಲಧಾರೆಗಳು ದಟ್ಟ ಗಿಡ, ಮರಗಳಿಂದ ಆವೃತ್ತವಾಗಿದ್ದು ಅವುಗಳ ಸಮೀಪ ಹೋಗಲಾಗಲಿಲ್ಲ. ಇನ್ನು ಕೆಲವು ತೀರಾ ಅಪಾಯಕಾರಿ ಸ್ಥಳದಲ್ಲಿದ್ದವು.

ಕಾಲುಹಾದಿಯುದ್ದಕ್ಕೂ ಕಂಡ ಈ ಯಾವ ಜಲಕನ್ನಿಕೆಗಳಿಗೂ ನಿರ್ದಿಷ್ಟ ಹೆಸರಿಲ್ಲ. ನಾವು ತಮಾಷೆಗೆಂದು ಆಯಾ ತಿರುವಿನ ಹೆಸರಿಟ್ಟು ಮುಂದು–ವರಿದೆವು. ನಡುನಡುವೆ ಮಳೆಯ ಸಿಂಚನ. ಹಾದಿಬದಿಯ ಜಿಗಣೆಗಳ ಜತೆಗೆ ತಿಕ್ಕಾಟ ನಡೆಸುತ್ತಾ ಮುಂದುವರಿದೆವು. ಕೊಡಗಿನ ಹಸಿರು ಸಂಭ್ರಮ ನಮ್ಮ ನಡಿಗೆಯ ಆಯಾಸವನ್ನು ಮರೆಸಿತ್ತು. ಜತೆಗೆ ಮಳೆಕಾಡಿನ ರಾಯಭಾರಿ–ಗಳಾದ ವಿಭಿನ್ನ ಹಕ್ಕಿಗಳೂ ನಡಿಗೆಗೆ ಉತ್ಸಾಹ ತುಂಬಿಸಿದ್ದವು. ರಾಕೆಟ್ ಬಾಲದ ಕಾಜಾಣವೊಂದು ತನ್ನ ಉದ್ದಬಾಲವ ಜಂಬದಿಂದ ಓಲಾಡಿ ನರ್ತಿಸಿದ್ದಂತೂ ಖುಷಿ ಕೊಟ್ಟಿತು. ಮಲಬಾರ್ ಅಳಿಲು ಅಲ್ಲಲ್ಲಿ ಚಂಗನೆ ಜಿಗಿದು ಕೊಡಗಿನ ಜೀವ ವೈವಿಧ್ಯವನ್ನು ಪರಿಚಯಿಸಿತ್ತು.

ಮಧ್ಯಾಹ್ನ 3 ಗಂಟೆಯ ಹೊತ್ತಿಗೆ ಕರಿಕೆಯ ಕೊನೆಯ ಜಲಧಾರೆಯ ಸನಿಹ ಬಂದಿದ್ದೆವು. ಮಳೆಯ ವೇಗವೂ ಇಮ್ಮಡಿಸಿತ್ತು. ಮಳೆಕಾಡಿನ ಮಳೆಯ ಪರಿಚಯವಾಯಿತು. ಕರಿಕೆಯ ಜಲಕನ್ನಿಕೆಯರನ್ನು ಕಂಡ ಧನ್ಯತಾ ಭಾವದೊಂದಿಗೆ ಮನೆ ತಲುಪಿದೆವು. ●

